# ನೋ ಪ್ರೈವೇಟ್ ಅಫೇರ್!



ಐಶ್ ಮತ್ತು ಅಭಿಯ ವೈಯಕ್ತಿಕ ಜೀವನಕ್ಕೆ ಯಾರೂ ಇಣುಕಿ ನೋಡುವಂತಿಲ್ಲ. ವೃತ್ತಿ ಬೇರೆ– ವೈಯಕ್ತಿಕ ಜೀವನ ಬೇರೆ ಎನ್ನುವುದನ್ನು ಇಬ್ಬರೂ ಪದೇ ಪದೇ ಬಾಲಿವುಡ್ ನಿರ್ಮಾಪಕರಿಗೆ ಮನದಟ್ಟು ಮಾಡಿಕೊಡುತ್ತಿದ್ದಾರೆ.

ಅಭಿಷೇಕ್ ಬಚ್ಚನ್‌ನನ್ನು ಇತ್ತೀಚೆಗೆ ಪ್ರತಿಷ್ಠಿತ ಮ್ಯಾಗಸಿನ್ ಸಂದರ್ಶಿಸಿದಾಗ 'ನಿಮ್ಮ ಜತೆಗೇ ಮದುವೆಯಾದ ಬಹಳಷ್ಟು ಜನರಿಗೆ ಮಕ್ಕಳಾಗಿದೆ. ನಿಮಗೇಕೆ ಆಗಿಲ್ಲ?' ಎಂಬ ಪ್ರಶ್ನೆ ಬಂತು. ಅಭಿಷೇಕ್ ಜಂಟ್ಲ್‌ಮ್ಯಾನ್ ರೀತಿಯಲ್ಲಿ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾನೆ– 'ಇದು ನೀವು ಕೇಳಬಹುದಾದ ಪ್ರಶ್ನೆ ಅಲ್ಲ. ಯಾರೂ ಹಾಗೆ ಕೇಳಬಾರದು. ಅದು ನಮ್ಮ ವೈಯಕ್ತಿಕ ವಿಷಯ. ಅಷ್ಟಕ್ಕೂ ನಿಮಗೆ ಉತ್ತರ ಬೇಕೆಂದರೆ ತಗೊಳ್ಳಿ. ಇಬ್ಬರು ಮಕ್ಕಳು ಇರಬೇಕು ಅನ್ನೋದು ನನ್ನ ಇಚ್ಛೆ. ಅದನ್ನು ಐಶ್ ಜತೆ ಬಹಳ ಸಲ ಚರ್ಚಿಸಿದ್ದೇನೆ. ನಾವೂ ಯೋಜನೆ ಮಾಡಿದ್ದೇವೆ. ದೇವರ ದಯೆ ಇದ್ದರೆ ಅದೂ ಆಗುತ್ತದೆ..' ಎಂದಿದ್ದಾನೆ ಅಭಿ. ಪ್ರಶ್ನೆ ಕೇಳಿದವರಿಗೆ ಉತ್ತರ ಅರ್ಥವಾದಂತೆ ಕಾಣಲಿಲ್ಲ. ಅಭಿಷೇಕ್ ಉದ್ದೇಶವೂ ಅದೇ ಇದ್ದಿರಬೇಕು.

ಇನ್ನೊಂದೆಡೆ ಐಶ್ವರ್ಯ ರೈ ಖಾಸಗಿ ಜೀವನದ ಯಾವುದೇ ಶೂಟಿಂಗ್ ಇಲ್ಲ ಎಂದು ಹಾಲಿವುಡ್ ಸ್ಟುಡಿಯೋ ಒಂದಕ್ಕೆ ಸ್ಪಷ್ಟಪಡಿಸಿದ್ದಾಳೆ. ಹಾಲಿವುಡ್‌ನ ಸ್ಟುಡಿಯೋವೊಂದು ಐಶ್ವರ್ಯ ವೈಯಕ್ತಿಕ ಜೀವನದ ಆಧಾರದಲ್ಲಿ ಸಾಕ್ಷ್ಯಚಿತ್ರವೊಂದನ್ನು ನಿರ್ಮಿಸಲು ಮುಂದೆ ಬಂದಿದೆ. ಅದಕ್ಕಾಗಿ ಐದು ಕೋಟಿ ರೂಪಾಯಿ ಸಂಭಾವನೆಯ ಆಸೆಯನ್ನೂ ಹುಟ್ಟಿಸಿದೆ. ಆದರೆ ಐಶ್ ಬೇಬಿ 'ಬಿಲ್‌ಕುಲ್ ನೋ' ಎಂದಿದ್ದಾಳೆ. 'ಈ ಹಿಂದೆ ಶಾರೂಕ್ ಖಾನ್ ಕುರಿತು ಸಾಕ್ಷ್ಯಚಿತ್ರ ನಿರ್ಮಾಣವಾಗಿ ಬಹಳ ಜನಪ್ರಿಯವಾಗಿದೆ' ಎಂದೂ ಸ್ಟುಡಿಯೋದವರು ನೆನಪಿಸಿದ್ದಾರೆ. ಆದರೆ ಐಶ್ವರ್ಯ ಒಪ್ಪಿಲ್ಲ. 'ಮನೆ ಅನ್ನೋದು ಖಾಸಗಿ ವಿಷಯ. ಅಲ್ಲೆಲ್ಲ ಕ್ಯಾಮೆರಾ ಇಟ್ಟು ಬಹಿರಂಗವಾಗೋದು ನನಗೆ ಇಷ್ಟವಿಲ್ಲ' ಎನ್ನೋದು ಐಶ್ ಉತ್ತರ!



# ಆಶಾ ದೀದಿ ಬರ್ತ್‌ಡೇ

ಆಶಾ ದೀದಿ ತನ್ನ 77ನೆ ಹುಟ್ಟುಹಬ್ಬವನ್ನು ದೂರದ ಸಿಂಗಾಪುರದಲ್ಲಿ ಆಚರಿಸಿಕೊಂಡಿದ್ದಾರೆ. 77ರಲ್ಲೂ ಅಚ್ಚಳಿಯದ ಧ್ವನಿ ಮಾಧುರ್ಯವನ್ನು ಉಳಿಸಿಕೊಂಡಿರುವ, ಚಿತ್ರರಂಗದಲ್ಲಿ ಬ್ಯುಸಿ ಆಗಿರುವ ಆಶಾ ದೀದಿ, ಹುಟ್ಟುಹಬ್ಬದ ಬೆನ್ನಲ್ಲೆ ಸಿಂಗಾಪುರದಲ್ಲಿ 'ರಾಹುಲ್ ಆ್ಯಂಡ್ ಐ' ಎಂಬ ಸಂಗೀತ ಕಾರ್ಯಕ್ರಮವನ್ನೂ ನೀಡಿದ್ದಾರೆ.

ಇಂಗ್ಲಿಷ್, ರಷ್ಯನ್, ಜೆಕ್ ಸಹಿತ ಜಗತ್ತಿನ 18 ಭಾಷೆಗಳಲ್ಲಿ ಈವರೆಗೆ 12 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ರೆಕಾರ್ಡ್ ಮಾಡಿರುವ ಆಶಾ ದೀದಿ, ಈ ವಯಸ್ಸಿನಲ್ಲೂ ಅಭಿಮಾನಿಗಳ ಜತೆ ಸಂಪರ್ಕ ಬಿಟ್ಟುಕೊಟ್ಟಿಲ್ಲ. ಟ್ವಿಟರ್‌ನಲ್ಲಿ ನಿಯಮಿತವಾಗಿ ಕಾಣಿಸಿಕೊಳ್ಳುವ ಆಶಾ, ಸಿಂಗಾಪುರದಿಂದಲೇ ಅಭಿಮಾನಿಗಳಿಗೆ ಥ್ಯಾಂಕ್ಸ್ ಹೇಳಿದ್ದಾರೆ.

■ ಬಿಂದು

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65